

ವರ್ಧನೆಯಾಗಲು ಆಮ್ಲದ pH ಅತಿ ಅನುಕೂಲಕರ. ಅಂತಹ ಅನುಕೂಲಕರ ವಾತಾವರಣ ಈ ತಂಪುಪಾನೀಯಗಳ ಸೇವನೆಯಿಂದ ಸೃಷ್ಟಿಯಾಗುತ್ತದೆ.

ಬಾಯಾರಿಕೆಯನ್ನು ತಗ್ಗಿಸುವುದು ತಂಪು ಪಾನೀಯಗಳಿಂದ ಸಾಧ್ಯವಿಲ್ಲದ ಕೆಲಸ. ಬಾಯಾರಿಕೆಯಾದಾಗಲೆಲ್ಲ ತಂಪು ಪೇಯ ಕುಡಿಯುವ ಅಭ್ಯಾಸ ಜೀವಕೋಶಗಳನ್ನು ಒಣಗಿಸುತ್ತದೆ. ಇದರಿಂದ ರೋಗ ನಿರೋಧಕ ಶಕ್ತಿಗೆ ಕುತ್ತು.

ಇವುಗಳಲ್ಲಿನ ಹೆಚ್ಚಿದ ಫಾಸ್ಫೇಟ್ ಮಟ್ಟ ಆತಂಕಕಾರಿ. ಈ ಫಾಸ್ಫೇಟ್ ಜೀವಕ್ಕೆ ಅತ್ಯಗತ್ಯವಾದ ಲವಣಗಳನ್ನು ಕರಗಿಸುತ್ತದೆ. ದೇಹದ ಹೆಚ್ಚಿನ ವಿಟಮಿನ್‌ಗಳು ಈ ಲವಣಗಳಿಲ್ಲದೇ ಕೆಲಸ ಮಾಡಲಾರವು.

ಈ ಪೇಯಗಳಲ್ಲಿರುವ ಅತಿ ಸಕ್ಕರೆ ಪ್ಯಾಂಕ್ರಿಯಾಸ್ ಗ್ರಂಥಿಯನ್ನು ಹೆಚ್ಚು ಇನ್ಸುಲಿನ್ ಸ್ರವಿಸುವಂತೆ ಮಾಡುತ್ತದೆ. ಇದರಿಂದ ಮತ್ತೆ ಮತ್ತೆ ರಕ್ತದಲ್ಲಿ ಸಕ್ಕರೆಯ ಹಠಾತ್ ಏರುವಿಕೆ, ಹಠಾತ್ ಇಳಿಯುವಿಕೆ ಉಂಟಾಗಿ ಕ್ರಮೇಣ ಮಧುಮೇಹ – ಡಯಾಬಿಟಿಸ್‌ಗೆ ಕಾರಣವಾಗುತ್ತದೆ. ಬೆಳೆಯುತ್ತಿರುವ ಮಕ್ಕಳ ವಿಷಯದಲ್ಲಿ ಇದು ಬಹು ಆತಂಕಕಾರಿ.

ಇವು ಪಚನಕ್ರಿಯೆಯನ್ನು ಪೂರ್ತಿಯಾಗಿ ಮುಚ್ಚಿ ಹಾಕುತ್ತದೆ. ಅಂದರೆ ನೀವು ಬರ್ಗರ್ ಜೊತೆಗೋ, ಫ್ರೆಂಚ್ ಫ್ರೈಸ್ ಜೊತೆಗೋ ತಂಪುಪಾನೀಯ ಕುಡಿದಿರಿ ಎಂದುಕೊಳ್ಳಿ. ಮೊದಲೇ ಬರ್ಗರ್–ಫ್ರೆಂಚ್ ಫ್ರೈಸ್ ಜೀರ್ಣವಾಗಲು ಬೇಕಾದ ಸಮಯ ಬಹಳ. ಅದರ ಜೊತೆಗಿನ ತಂಪುಪಾನೀಯ ಜೀರ್ಣಕ್ರಿಯೆಯನ್ನು ನಿಲ್ಲಿಸಿಬಿಡುತ್ತದೆ. ಪರಿಣಾಮ ನೀವು ಹೊಟ್ಟೆ ತುಂಬುವಂತೆ ತಿಂದಿದ್ದರೂ,ಅದರಿಂದ ನಿಮಗೆ ಸಿಕ್ಕುವ ಶಕ್ತಿ 'ಸೊನ್ನೆ'! ನೀವು ಬೊಜ್ಜು ಸೇರಿ ದಪ್ಪವಾದರೂ, ನಿಮ್ಮ ದೈಹಿಕ ಸಾಮರ್ಥ್ಯ 'ಜೀರೋ'!

ಸರ್ಕಾರದ ವಿವಿಧ ಶಾಖೆಗಳು ಈ ಎಲ್ಲದರ ಬಗ್ಗೆಯೂ ಎಚ್ಚರಿಕೆ ವಿಧಿಸಿವೆ. ಆದರೆ ಸ್ವತಃ ಗ್ರಾಹಕ ಎಚ್ಚರದಿಂದ ತನ್ನ ನಡವಳಿಕೆ ಬದಲಿಸುವವರೆಗೆ ತಂಪು ಪಾನೀಯ ಉದ್ಯಮ ನೀರಿನ ಮೇಲಿನ ತನ್ನ ಗೆಲುವು ಸಾಧಿಸುತ್ತಲೇ ಇರುತ್ತದೆ. ಹಾಗಾಗದಿರಲು ತಂಪು ಪಾನೀಯ ಕುಡಿಯುವ ಬದಲು ತಣ್ಣಗೆ ನೀರು ಕುಡಿಯಿರಿ.

ಹಿಪ್ಪೋಕ್ರಾಟಿಸ್– ಆಧುನಿಕ ವೈದ್ಯವಿಜ್ಞಾನದ ಪಿತಾಮಹ ಹೇಳಿದ ಒಂದು ಮಾತಿದೆ. 'ಮಾನವ ದೇಹ ಒಂದು ದೇವಸ್ಥಾನವಿದ್ದಂತೆ, ಅದರ ಆರೈಕೆ ಮತ್ತು ಗೌರವ ನೀಡುವಿಕೆ ನಮ್ಮ ಕರ್ತವ್ಯ' ಎಂದು. ನೀರು ಅಂತಹ ದೇಹವನ್ನು ಶುದ್ಧೀಕರಿಸುತ್ತದೆ. ದೇಹದ ತುಂಬಾ ತುಂಬಿದ್ದೂ ಸ್ವಲ್ಪವೂ ಕ್ಯಾಲೋರಿಯ, ಬೊಜ್ಜಿನ ಹೊರೆಯನ್ನು ತರುವುದಿಲ್ಲ. ದೇಹದ ಪ್ರತಿಯೊಂದು ಅಂಗಕ್ಕೂ, ಅದರ ಕಾರ್ಯಚಟುವಟಿಕೆಗಳಿಗೂ ಇದು ಬೇಕು ಎಂದ ಮೇಲೆ ನೀರೇ ಅತ್ಯುತ್ತಮ ಆರೋಗ್ಯ ಪೇಯ – **Water is the best health drink**– ಎಂಬ ಮಾತು ನೂರಕ್ಕೆ ನೂರು ಸತ್ಯ! ■




# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450